# The Code of Civil Procedure (Karnataka Amendment) Act, 2023

Act No. 8 of 2024

DISCLAIMER: This document is being furnished to you for your information by PRS Legislative Research (PRS). The contents of this document have been obtained from sources PRS believes to be reliable. These contents have not been independently verified, and PRS makes no representation or warranty as to the accuracy, completeness or correctness. In some cases the Principal Act and/or Amendment Act may not be available. Principal Acts may or may not include subsequent amendments. For authoritative text, please contact the relevant state department concerned or refer to the latest government publication or the gazette notification. Any person using this material should take their own professional and legal advice before acting on any information contained in this document. PRS or any persons connected with it do not accept any liability arising from the use of this document. PRS or any persons connected with it shall not be in any way responsible for any loss, damage, or distress to any person on account of any action taken or not taken on the basis of this document.

ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ರಾಜ್ಯ ಪತ್ರಿಕೆ

| ಭಾಗ – ೪ ಎ<br>Part – IVA | ಬೆಂಗಳೂರು, ಗುರುವಾರ, ೨೯, ಫೆಬ್ರವರಿ, ೨೦೨೪(ಫಾಲ್ಗುಣ, ೧೦, ಶಕವರ್ಷ, ೧೯೪೫)<br>BENGALURU, THURSDAY, 29, FEBRUARY, 2024(PHALGUNA, 10, SHAKAVARSHA, 1945) | ನಂ. ೧೨೭<br>No. 127 |
|---|---|---|

**PARLIAMENTARY AFFAIRS AND LEGISLATION SECRETARIAT**

**NOTIFICATION**

**NO: DPAL 20 SHASANA 2023, BENGALURU, DATED: 29.02.2024**

The Code of Civil Procedure (Karnataka Amendment) Bill, 2023 ಇದಕ್ಕೆ 2024ರ ಫೆಬ್ರುವರಿ ತಿಂಗಳ 18ನೇ ದಿನಾಂಕದಂದು ರಾಷ್ಟ್ರಾಧ್ಯಕ್ಷರ ಅನುಮತಿ ದೊರೆತಿದ್ದು, ಸಾಮಾನ್ಯ ತಿಳುವಳಿಕೆಗಾಗಿ ಇದನ್ನು 2024ರ ಕರ್ನಾಟಕ ಅಧಿನಿಯಮ ಸಂಖ್ಯೆ:08 ಎಂಬುದಾಗಿ ಕರ್ನಾಟಕ ರಾಜ್ಯಪತ್ರದ ವಿಶೇಷ ರಾಜ್ಯಪತ್ರಿಕೆ (ಭಾಗ IV) ಯಲ್ಲಿ ಪ್ರಕಟಿಸಬೇಕೆಂದು ಆದೇಶಿಸಲಾಗಿದೆ,-

**KARNATAKA ACT NO. 08 OF 2024**

(First Published in the Karnataka Gazette Extra-ordinary on the 29th day of February 2024)

**THE CODE OF CIVIL PROCEDURE (KARNATAKA AMEDMENT) ACT, 2023**

(Received the assent of the President on the 18th day of February, 2024)

An Act further to amend the Code of Civil Procedure, 1908 (Central Act 5 of 1908) in its application to the State of Karnataka, to provide for speedy disposal of cases in which persons having no sustained strength to fight prolonged litigation in courts are involved.

Whereas it is expedient further to amend the Code of Civil Procedure, 1908 (Central Act 5 of 1908) to secure to persons having no sustained strength to fight prolonged litigation in courts of Law by reason of their being small or marginal farmers and persons of the economically weaker sections i.e., persons whose income from all sources does not exceed fifty thousand rupees in a year, speedy justice by stipulating a reasonable time frame within which such cases shall be disposed of on preference;

Be it enacted by the Karnataka Legislature in the seventy fourth year of the Republic as follows:-

**1. Short title, commencement and extent.-** (1) This Act may be called the Code of Civil Procedure (Karnataka Amendment) Act, 2023.

(2) It shall extend to the whole of the State of Karnataka.

(3) It shall come into force from such date as the state Government may by notification appoint.

**2. Insertion of new rule 4 in Order XVII C.P.C.-** In Order XVII of the Code of Civil Procedure, 1908 (Central Act 5 of 1908) after rule 3, the following shall be inserted, namely:-

"**4. Priority of disposal of cases involving small farmers and persons belonging to the economically weaker sections.-** (1) Where in any suit or other proceeding in any court, a small farmer or a person belonging to the economically weaker sections is involved either as plaintiff or as defendant, such case shall be taken up on priority over other cases listed for the day.

(2) The Court shall hear and dispose of such case, as far as possible within six months,-

(i) in a case pending on the date of commencement of the Code of Civil Procedure (Karnataka Amendment) Act, 2023 from such date of commencement or the date next fixed for hearing of the case, or;

(ii) in a case filed after the commencement of the Code of Civil Procedure (Karnataka Amendment) Act, 2023 from the date fixed in the summons or notice of such suit or proceeding for the appearance of the defendant or respondent.

(3) (i) Notwithstanding anything said in clause (i) of sub-rule (2) above a party claiming benefit of this rule, may apply to the Court along with an affidavit in proof of his beneficiary status, for disposal of his case on preference in accordance with the provisions of this rule.

(ii) In cases filed after the commencement of this Amendment Act, the beneficiary may apply to the Court, if he is the plaintiff, and if he is a defendant on the date of his first appearance before Court, in response to the summons, in the same manner as in clause (i) above.

(iii) Where the beneficiary status of the applicant is disputed the Court shall try the question summarily and dispose of the application as for as possible within fifteen days, on such terms including compensatory costs.

(4) In disposing of a case under this rule the Court may, in appropriate circumstances, adopt the procedure set out in the provisions of Order X, Order XII and Order XXXVII of the Code.

(5) No adjournment shall be granted in such a case at the instance of the opponent of the beneficiary, except for compelling reasons to be recorded by the Court.

**Explanation 1:** For the purposes of this rule a 'case' includes a suit or other proceeding arising out of such suit pending in the High Court, or other Civil Courts.

**Explanation 2:** 'Small farmer' means a person who on the date of commencement of this Act, holds whether as owner, or mortgagee with possession or partly in one capacity and partly in another not more than such units of land, the annual income from which does not exceed such amount as determined by the State Government and who has no income from any source other than agriculture.

**Explanation 3:** 'Persons belonging to weaker section' means persons whose annual income from all sources does not exceed as specified by the Government from time to time.

By Order and in the name of
the Governor of Karnataka,
**G.SRIDHAR**
Secretary to Government
Department of Parliamentary
Affairs and Legislation

## ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಸಚಿವಾಲಯ
## ಅಧಿಸೂಚನೆ
**ಸಂಖ್ಯೆ: ಸಂವ್ಯಶಾಇ 20 ಶಾಸನ 2023, ಬೆಂಗಳೂರು, ದಿನಾಂಕ: 29.02.2024**

The Karnataka Official Language Act, 1963 (Karnataka Act 26 of 1963) ರ ಪ್ರಕರಣ 5-ಎ ರ ಅಡಿಯಲ್ಲಿ ಅಧಿಕೃತಗೊಳಿಸಿದ the Code of Civil Procedure (Karnataka Amendment) Act, 2023 (Karnataka Act No 08 of 2024) ರ ಕನ್ನಡ ಭಾಷಾಂತರವನ್ನು ಅಧಿಕೃತ ಪಠ್ಯವೆಂದು ಕರ್ನಾಟಕ ರಾಜ್ಯಪತ್ರದ ವಿಶೇಷ ರಾಜ್ಯಪತ್ರಿಕೆ (ಭಾಗ-IV) ಯಲ್ಲಿ ಪ್ರಕಟಿಸಬೇಕೆಂದು ಆದೇಶಿಸಲಾಗಿದೆ,-

**2024 ರ ಕರ್ನಾಟಕ ಅಧಿನಿಯಮ ಸಂಖ್ಯೆ:08**

(2024ರ ಫೆಬ್ರವರಿ ತಿಂಗಳ 29 ನೇ ದಿನಾಂಕದಂದು ಕರ್ನಾಟಕ ರಾಜ್ಯಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಗಿದೆ)

**ಸಿವಿಲ್ ಪ್ರಕ್ರಿಯಾ ಸಂಹಿತೆ (ಕರ್ನಾಟಕ ತಿದ್ದುಪಡಿ) ಅಧಿನಿಯಮ, 2023**

(2024 ರ ಫೆಬ್ರುವರಿ ತಿಂಗಳ 18ನೇ ದಿನಾಂಕದಂದು ರಾಷ್ಟ್ರಾಧ್ಯಕ್ಷರಿಂದ ಅನುಮತಿಯನ್ನು ಪಡೆಯಲಾಗಿದೆ)

ದೀರ್ಘಕಾಲದಿಂದ ನ್ಯಾಯಾಲಯಗಳಲ್ಲಿ ಬಾಕಿಯಿರುವ ವ್ಯಾಜ್ಯದ ವಿರುದ್ಧ ಹೋರಾಡಲು ಸುಸ್ಥಿರ ಬಲವನ್ನು ಹೊಂದಿರದ ವ್ಯಕ್ತಿಗಳನ್ನು ಒಳಗೊಂಡಿರುವ ಪ್ರಕರಣಗಳ ತ್ವರಿತ ವಿಲೇವಾರಿಗಾಗಿ ಉಪಬಂಧ ಕಲ್ಪಿಸಲು ಕರ್ನಾಟಕ ರಾಜ್ಯಕ್ಕೆ ಅನ್ವಯವಾಗುವಂತೆ ಸಿವಿಲ್ ಪ್ರಕ್ರಿಯಾ ಸಂಹಿತೆ, 1908 (1908ರ ಕೇಂದ್ರ ಅಧಿನಿಯಮ 5)ಕ್ಕೆ ಮತ್ತಷ್ಟು ತಿದ್ದುಪಡಿ ಮಾಡುವ ಒಂದು ಅಧಿನಿಯಮ.

ಸಣ್ಣ ಅಥವಾ ಅತಿಸಣ್ಣ ರೈತರು ಹಾಗೂ ಆರ್ಥಿಕವಾಗಿ ದುರ್ಬಲವಾದ ವರ್ಗಗಳ ವ್ಯಕ್ತಿಗಳು ಎಂದರೆ, ಅವರ ಎಲ್ಲಾ ಮೂಲಗಳಿಂದ ಬರುವ ಆಧಾಯವು ವಾರ್ಷಿಕ ಐವತ್ತು ಸಾವಿರ ರೂಪಾಯಿಗಳಿಗೆ ಮೀರದ ಕಾರಣದಿಂದ ದೀರ್ಘಕಾಲದಿಂದ ನ್ಯಾಯಾಲಯಗಳಲ್ಲಿ ಬಾಕಿಯಿರುವ ವ್ಯಾಜ್ಯದ ವಿರುದ್ಧ ಹೋರಾಡಲು ಸುಸ್ಥಿರ ಬಲವನ್ನು ಹೊಂದಿರದ ವ್ಯಕ್ತಿಗಳಿಗೆ ಭದ್ರತೆಯನ್ನು ನೀಡಲು ಮತ್ತು ಅಂಥ ಪ್ರಕರಣಗಳನ್ನು ಆದ್ಯತೆಯ ಮೇಲೆ ವಿಲೆ ಮಾಡುವುದಕ್ಕಾಗಿ ಯುಕ್ತ ಕಾಲಮಿತಿಯನ್ನು ಗೊತ್ತುಪಡಿಸುವ ಮೂಲಕ ತ್ವರಿತ ನ್ಯಾಯವನ್ನು ಒದಗಿಸಲು ಸಿವಿಲ್ ಪ್ರಕ್ರಿಯಾ ಸಂಹಿತೆ, 1908 (1908ರ ಕೇಂದ್ರ ಅಧಿನಿಯಮ 5)ಕ್ಕೆ ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು, ಭಾರತ ಗಣರಾಜ್ಯದ ಎಪ್ಪತ್ನಾಲ್ಕನೇ ವರ್ಷದಲ್ಲಿ ಕರ್ನಾಟಕ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ:-

**1. ಸಂಕ್ಷಿಪ್ತ ಹೆಸರು, ಪ್ರಾರಂಭ ಮತ್ತು ವ್ಯಾಪ್ತಿ.-** (1)ಈ ಅಧಿನಿಯಮವನ್ನು ಸಿವಿಲ್ ಪ್ರಕ್ರಿಯಾ ಸಂಹಿತೆ (ಕರ್ನಾಟಕ ತಿದ್ದುಪಡಿ) ಅಧಿನಿಯಮ, 2023 ಎಂದುಕರೆಯತಕ್ಕದ್ದು.

(2) ಇದು, ಇಡೀ ಕರ್ನಾಟಕ ರಾಜ್ಯಕ್ಕೆ ವ್ಯಾಪ್ತವಾಗತಕ್ಕದ್ದು.

(3) ಇದು ರಾಜ್ಯ ಸರ್ಕಾರವು ಅಧಿಸೂಚನೆ ಮೂಲಕ ಗೊತ್ತುಪಡಿಸಬಹುದಾದಂಥ ದಿನಾಂಕದಿಂದ ಜಾರಿಗೆ ಬರತಕ್ಕದ್ದು

**2. ಸಿವಿಲ್ ಪ್ರಕ್ರಿಯಾ ಸಂಹಿತೆಯ ಕ್ರಮಾದೇಶ XVII ರಲ್ಲಿ ಹೊಸ ನಿಯಮ 4ರ ಸೇರ್ಪಡೆ.-** ಸಿವಿಲ್ ಪ್ರಕ್ರಿಯಾ ಸಂಹಿತೆ, 1908 (1908ರ ಕೇಂದ್ರ ಅಧಿನಿಯಮ 5)ರ ಕ್ರಮಾದೇಶ XVIIರಲ್ಲಿ 3ನೇ ನಿಯಮದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

**"4. ಸಣ್ಣ ರೈತರು ಮತ್ತು ಆರ್ಥಿಕವಾಗಿ ದುರ್ಬಲವಾದ ವರ್ಗಗಳಿಗೆ ಸೇರಿರುವ ವ್ಯಕ್ತಿಗಳನ್ನು ಒಳಗೊಂಡಿರುವ ಪ್ರಕರಣಗಳ ವಿಲೇವಾರಿಗೆ ಆದ್ಯತೆ.-**(1) ಯಾವುದೇ ನ್ಯಾಯಾಲಯದಲ್ಲಿನ ಯಾವುದೇ ದಾವೆ ಅಥವಾ ಇತರೆ ವಿವರಣೆಯಲ್ಲಿ ಸಣ್ಣ ರೈತರು ಅಥವಾ ಆರ್ಥಿಕವಾಗಿ ದುರ್ಬಲವಾದ ವರ್ಗಗಳಿಗೆ ಸೇರಿರುವ ವ್ಯಕ್ತಿಯು ವಾದಿಯಾಗಿ ಅಥವಾ ಪ್ರತಿವಾದಿಯಾಗಿ ಒಳಗೊಂಡಿರುವಲ್ಲಿ ಆ ದಿನದ ಪಟ್ಟಿಯಲ್ಲಿ ಸೇರಿರುವ ಪ್ರಕರಣಗಳಿಗಿಂತ ಅಂಥ ಪ್ರಕರಣವನ್ನು ಆದ್ಯತೆಯ ಮೇಲೆ ತೆಗೆದುಕೊಳ್ಳತಕ್ಕದ್ದು.

(2) ನ್ಯಾಯಾಲಯವು,-

(i) ಸಿವಿಲ್ ಪ್ರಕ್ರಿಯಾ ಸಂಹಿತೆ (ಕರ್ನಾಟಕ ತಿದ್ದುಪಡಿ) ಅಧಿನಿಯಮ, 2023ರ ಪ್ರಾರಂಭದ ದಿನಾಂಕದಂದು ಪ್ರಕರಣವು ಬಾಕಿಯಿರುವಲ್ಲಿ ಅಂಥ ಪ್ರಾರಂಭದ ದಿನಾಂಕದಿಂದ ಅಥವಾ ಪ್ರಕರಣದ ಸುನಾವಣೆಗಾಗಿ ನಿಗದಿಪಡಿಸಿದ ತರುವಾಯದ ದಿನಾಂಕದಿಂದ, ಅಥವಾ;

(ii) ಸಿವಿಲ್ ಪ್ರಕ್ರಿಯಾ ಸಂಹಿತೆ (ಕರ್ನಾಟಕ ತಿದ್ದುಪಡಿ) ಅಧಿನಿಯಮ, 2023ರ ಪ್ರಾರಂಭದ ದಿನಾಂಕದ ತರುವಾಯ ಪ್ರಕರಣವನ್ನು ದಾಖಲು ಮಾಡಿರುವಲ್ಲಿ ಅಂಥ ದಾವೆ ಅಥವಾ ವ್ಯವಹರಣೆಯ ಸಮನ್ನುಗಳಲ್ಲಿ ಅಥವಾ ನೋಟೀಸಿನಲ್ಲಿ ವಾದಿ ಅಥವಾ ಪ್ರತಿವಾದಿಯ ಹಾಜರಾತಿಗಾಗಿ ನಿಗಿದಿಪಡಿಸಿದ ದಿನಾಂಕದಿಂದ,

-ಆರು ತಿಂಗಳ ಒಳಗೆ ಸಾಧ್ಯವಾದಷ್ಟು ಬೇಗನೆ ಅಂಥ ಪ್ರಕರಣವನ್ನು ಸುನಾವಣೆ ಮಾಡಿ, ವಿಲೆ ಮಾಡತಕ್ಕದ್ದು.

(3) (i) ಮೇಲಿನ (2)ನೇ ಉಪನಿಯಮದ ಖಂಡ (i)ನಲ್ಲಿ ಏನೇ ಹೇಳಿದ್ದಾಗ್ಯೂ ಈ ನಿಯಮದ ಪ್ರಯೋಜನವನ್ನು ಕ್ಲೇಮು ಮಾಡುವ ಪಕ್ಷಕಾರನು ಈ ನಿಯಮದ ಉಪಬಂಧಗಳಿಗೆ ಅನುಸಾರವಾಗಿ ತನ್ನ ಪ್ರಕರಣವನ್ನು ಆದ್ಯತೆ ಮೇಲೆ ವಿಲೆ ಮಾಡುವುದಕ್ಕಾಗಿ, ತನ್ನ ಪ್ರಯೋಜನದ ಸ್ಥಿತಿಗತಿಯ ರುಜುವಾತಿನ ರೂಪದಲ್ಲಿ ಒಂದು ಅಫೀಡಾವಿಟ್‌ನೊಂದಿಗೆ ನ್ಯಾಯಾಲಯಕ್ಕೆ ಅರ್ಜಿಸಲ್ಲಿಸಬಹುದು.

(ii) ಈ ತಿದ್ದುಪಡಿ ಅಧಿನಿಯಮದ ಪ್ರಾರಂಭದ ತರುವಾಯ ದಾಖಲುಮಾಡಲಾದ ಪ್ರಕರಣಗಳಲ್ಲಿ, ಫಲಾನುಭವಿಯು ಆತನು ವಾದಿಯಾಗಿರಲಿ ಮತ್ತು ಪ್ರತಿವಾದಿಯಾಗಿರಲಿ ಸಮನ್ನುಗಳಿಗೆ ಪ್ರತಿಯಾಗಿ ನ್ಯಾಯಾಲಯದ ಮುಂದೆ ತನ್ನ ಮೊದಲ ಹಾಜರಾತಿಯ ದಿನಾಂಕದಂದು ಮೇಲಿನ ಖಂಡ (i)ರಲ್ಲಿರುವಂತಹ ರೀತಿಯಲ್ಲಿಯೇ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಬಹುದು.

(iii) ಅರ್ಜಿದಾರನ ಪ್ರಯೋಜನದ ಸ್ಥಿತಿಗತಿಯು ವಿವಾದಿತವಾಗಿರುವಲ್ಲಿ ನ್ಯಾಯಾಲಯವು ನಷ್ಟ ಪರಿಹಾರಕ ನಷ್ಟಗಳೂ ಸೇರಿದಂತೆ ಅಂಥ ನಿಬಂಧನೆಗಳ ಮೇಲೆ, ಹದಿನೈದು ದಿನಗಳೊಳಗಾಗಿ ಸಾಧ್ಯವಾದಷ್ಟು ಬೇಗನೆ ಕ್ಷಿಪ್ರವಾಗಿ ಅರ್ಜಿಯನ್ನು ಅಧಿವಿಚಾರಣೆ ಮಾಡಿ ವಿಲೆ ಮಾಡತಕ್ಕದ್ದು.

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment WPP No. 297



(4) ಈ ನಿಯಮದ ಅಡಿಯಲ್ಲಿ ಪ್ರಕರಣವನ್ನು ವಿಲೆ ಮಾಡುವಾಗ, ನ್ಯಾಯಾಲಯವು ಸೂಕ್ತ ಸನ್ನಿವೇಶಗಳಲ್ಲಿ ಸಂಹಿತೆಯ ಕ್ರಮಾದೇಶ X, ಕ್ರಮಾದೇಶ XII ಮತ್ತು ಕ್ರಮಾದೇಶ XXXVIIರ ಉಪಬಂಧಗಳಲ್ಲಿ ನಿರೂಪಿಸಲಾದ ಕಾರ್ಯವಿಧಾನವನ್ನು ಅಳವಡಿಸಿಕೊಳ್ಳಬಹುದು.

(5) ನ್ಯಾಯಾಲಯವು ದಾಖಲಿಸಬೇಕಾದ ಕಾರಣಗಳನ್ನು ಸಂಗ್ರಹಿಸುವುದಕ್ಕಾಗಿ ಹೊರತು ಫಲಾನುಭವಿಯ ಪ್ರತಿವಾದಿಯ ಕಾರಣದಿಂದಾಗಿ ಅಂಥ ಪ್ರಕರಣವನ್ನು ಮುಂದೂಡಿಕೆ ಮಾಡತಕ್ಕದ್ದಲ್ಲ.

**ವಿವರಣೆ1:** ಈ ನಿಯಮದ ಉದ್ದೇಶಗಳಿಗಾಗಿ, "ಪ್ರಕರಣ" ಎಂಬ ಪದವು, ದಾವೆ ಅಥವಾ ಉಚ್ಚನ್ಯಾಯಾಲಯ ಅಥವಾ ಇತರೆ ಸಿವಿಲ್ ನ್ಯಾಯಾಲಯಗಳಲ್ಲಿ ಇತ್ಯರ್ಥದಲ್ಲಿರುವಂಥ ದಾವೆಯಿಂದ ಉದ್ಭವಿಸುವ ಇತರೆ ವ್ಯವಹರಣೆಯನ್ನು ಒಳಗೊಂಡಿಗೊಂಡಿರುತ್ತದೆ.

**ವಿವರಣೆ2:** "ಸಣ್ಣ ರೈತ" ಎಂದರೆ, ಈ ಅಧಿನಿಯಮದ ಪ್ರಾರಂಭದ ದಿನಾಂಕದಂದು ರಾಜ್ಯ ಸರ್ಕಾರವು ನಿರ್ಧರಿಸಿದಂತೆ ಅಂಥ ಜಮೀನಿಗೆ ಹೆಚ್ಚಿಲ್ಲದ ಜಮೀನಿನ ಒಡಯನಾಗಿ ಅಥವಾ ಅಡಮಾನದಾರನಾಗಿ ಸ್ವಾಧೀನತೆಯನ್ನು ಹೊಂದಿರುವ ಅಥವಾ ಒಂದು ಸಾಮರ್ಥ್ಯದಲ್ಲಿ ಭಾಗಶಃ ಮತ್ತು ಇನ್ನೊಂದರಲ್ಲಿ ಭಾಗಶಃ ಸ್ವಾಧೀನತೆಯನ್ನು ಹೊಂದಿರುವ, ಅಂಥ ಮೊತ್ತವನ್ನು ಮೀರದ ವಾರ್ಷಿಕ ವರಮಾನವನ್ನು ಹೊಂದಿರುವ ಮತ್ತು ಕೃಷಿಯನ್ನು ಹೊರತುಪಡಿಸಿ ಇತರೆ ಯಾವುದೇ ಮೂಲದಿಂದ ಆದಾಯವನ್ನು ಹೊಂದಿರದ ವ್ಯಕ್ತಿ.

**ವಿವರಣೆ3:** "ದುರ್ಬಲ ವರ್ಗಕ್ಕೆ ಸೇರಿದ ವ್ಯಕ್ತಿಗಳು" ಎಂದರೆ, ಎಲ್ಲಾ ಮೂಲಗಳಿಂದ ಯಾರ ವಾರ್ಷಿಕ ಆದಾಯವು ರಾಜ್ಯ ಸರ್ಕಾರವು ಕಾಲಕಾಲಕ್ಕೆ ನಿರ್ದಿಷ್ಟಪಡಿಸಿದಂಥ ಮೊತ್ತವನ್ನು ಮೀರಿರದಿಲ್ಲವೋ ಅಂಥ ವ್ಯಕ್ತಿಗಳು.

The above translation of the Code of Civil Procedure (Karnataka Amendment) Act, 2023 (Karnataka Act No.08 of 2024) shall be authoritative text in Kannada language under section 5-A of the Karnataka Official Language Act, 1963 (Karnataka Act 26 of 1963).

**ಥಾವರ್‌ಚಂದ್ ಗೆಹ್ಲೋಟ್**
ಕರ್ನಾಟಕ ರಾಜ್ಯಪಾಲರು

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

**ಜಿ.ಶ್ರೀಧರ್**
ಸರ್ಕಾರದ ಕಾರ್ಯದರ್ಶಿ,
ಸಂಸದೀಯ ವ್ಯವಹಾರಗಳು ಮತ್ತು
ಶಾಸನ ರಚನೆ ಇಲಾಖೆ.

ಮುದ್ರಕರು ಹಾಗೂ ಪ್ರಕಾಶಕರು:- ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು

THAMMAIAH